# ಕರ್ನಾಟಕ ಸರ್ಕಾರ
# ಕೈಮಗ್ಗ ಮತ್ತು ಜವಳಿ ಇಲಾಖೆ

ಸಂಖ್ಯೆ: ಕೈಜಇ/ಜಂ.ರಿ/ಸುತ್ತೋಲೆ/ನೋಂದಣಿ/2008-09

ಜವಳಿ ಆಯುಕ್ತರವರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು-1,
ದಿನಾಂಕ: 06/04/2009.

## ಸುತ್ತೋಲೆ

ವಿಷಯ:- ಕೈಮಗ್ಗ, ವಿದ್ಯುತ್‌ಮಗ್ಗ ಮತ್ತು ಸಿದ್ಧಉಡುಪು ನೇಕಾರರ ಸಹಕಾರ ಸಂಘಗಳ ನೋಂದಣಿಗಾಗಿ ಅನುಮತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಅನುಸರಿಸ ಬೇಕಾದ ಮಾರ್ಗಸೂಚಿಗಳು

ಉಲ್ಲೇಖ: 1) ಜವಳಿ ಆಯುಕ್ತರು ಮತ್ತು ಪದನಿಮಿತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಕೈಮಜ/ಜೆಆರ್‌ಬಿ1/ಸುತ್ತೋಲೆ/95-96, ದಿನಾಂಕ: 19/02/1996.

2) ಜವಳಿ ಆಯುಕ್ತರು ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರು ಜವಳಿ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಕೈಮಜ/ಸಂನಿ/402/96-97, ದಿನಾಂಕ: 28/01/1997

3) ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಇವರ ಅಧಿಸೂಚನೆ ಸಂಖ್ಯೆ: ಸಿಒ 223 ಸಿಎಲ್‌ಎಂ 2006, ದಿನಾಂಕ: 29/11/2007.

* * * * *

1. ಸಹಕಾರ ಸಂಘಗಳ ಕಾಯ್ದೆ-1959 ಕಲಂ-7 ರನ್ವಯ ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಸಿದ್ಧಉಡುಪು ನೇಕಾರರ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವ ಸಮಯದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾರಿಗಳು ನಿಯೋಜಿತ ಸಂಘದ ಪ್ರಸ್ತಾವನೆಯನ್ನು ಸರಿಯಾಗಿ ಪರಿಶೀಲಿಸದೆ ಹಾಗೂ ಒಂದೇ ಕಾರ್ಯವ್ಯಾಪ್ತಿಯಲ್ಲಿರುವ ಅಂತಹ ಸಂಘಗಳ ಆರ್ಥಿಕ ಸಬಲತೆಯನ್ನು ಪರಿಗಣಿಸದೆ ಒಂದಕ್ಕೂ ಹೆಚ್ಚಿನ ಸಂಘಗಳನ್ನು ನೋಂದಾಯಿಸಲು ಪ್ರಸ್ತಾವನೆಗಳನ್ನು ಈ ಕಛೇರಿಗೆ ಶಿಫಾರಸ್ಸು ಮಾಡುತ್ತಿರುವುದು ಕಂಡುಬಂದಿದೆ.
2. ಆದ್ದರಿಂದ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾರಿಗಳಿಗೆ ನೋಂದಣಿ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡುವಾಗ ನಿರ್ದಿಷ್ಟವಾದ ನಿಯಮಗಳನ್ನು ಪಾಲಿಸಲು ತಿಳಿಸುವುದು ಸೂಕ್ತವೆಂದು ಭಾವಿಸಿ ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿ ಮಾಡಲಾಗಿದೆ.

3. ನಿಯೋಜಿತ ಸಂಘದ ನೋಂದಣಿಗಾಗಿ ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಆಡಳಿತಾತ್ಮಕ ಅನುಮತಿ ನೀಡಲು ಅವಶ್ಯವಿರುವ ದಾಖಲಾತಿಗಳು.

3(1) ನಿಯೋಜಿತ ಸಂಘದ ಹೆಸರು ಮತ್ತು ವಿಳಾಸ.

3(2) ನಿಯೋಜಿತ ಸಂಘದ ಕಾರ್ಯವ್ಯಾಪ್ತಿ.

3(3) ನಿಯೋಜಿತ ಸಂಘದ ಸ್ಥಾಪನೆಯ ಪ್ರಮುಖ ಉದ್ದೇಶಗಳು.

3(4) ಧೃಡೀಕೃತ ಛಾಪಾ ಕಾಗದದ ಮೇಲೆ ಮುಖ್ಯಪ್ರವರ್ತಕರ ಹೆಸರು, ನಿಖರವಾದ ವಿಳಾಸ ಮತ್ತು ವಿವರ.

3(5) Certificate regarding, Compliance with Section 4, 6(2), 7(1) of the Act.

3(6) ನಿಯೋಜಿತ ಸಂಘದ ಯೋಜನಾ ವರದಿ.

3(7) ನಿಯೋಜಿತ ಸಂಘದ ಉಪನಿಯಮಗಳು ಇದರಲ್ಲಿ ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯನ್ನು ಸ್ಪಷ್ಟವಾಗಿ ನಮೂದಿಸುವುದು.

3(8) ನಿಯೋಜಿತ ಸಂಘದ ಸ್ಥಾಪನೆಗಾಗಿ ಆಪೇಕ್ಷಿಪಟ್ಟ ಪ್ರವರ್ತಕರ ಪ್ರಾರಂಭಿಕ ಸಭೆಯ ನಡವಳಿಕೆಯ ಮೂಲಪ್ರತಿ (ಈ ಸಭೆಯಲ್ಲಿ ಮುಖ್ಯ ಪ್ರವರ್ತಕರನ್ನು ಚುನಾಯಿಸಬೇಕು) ಈ ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾರಿಗಳ ಹಾಜರಾತಿ ಅವಶ್ಯಕವಾಗಿರುವುದು ಸಭೆಗೆ ಹಾಜರಾದ ನೇಕಾರರ ಪೂರ್ಣ ಮಾಹಿತಿ (ಹೆಸರು, ವಿಳಾಸ, ಸಹಿ).

3(9) ನಿಯೋಜಿತ ಸಂಘದಲ್ಲಿ ಶೇರುದಾರರಾಗಬಯಸುವ ನೇಕಾರರ ಹೆಸರು, ವಿಳಾಸ ಮತ್ತು ಸಹಿಯನ್ನೊಳಗೊಂಡ ಮಾಹಿತಿಯ ಪೂರ್ಣವಿವರ.

3(10) ಇದೇ ಉದ್ದೇಶದ ಬೇರೆ ಸಹಕಾರ ಸಂಘವು ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯಲ್ಲಿ ಸ್ಥಾಪಿತವಾಗಿಲ್ಲವೆಂಬುದರ ಬಗ್ಗೆ ಜವಳಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಧೃಡೀಕರಣ ಪತ್ರ, ಸ್ಥಾಪಿತವಾಗಿದ್ದರೆ ಈ ಹೊಸ ಸಂಘದ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ಹಾಗೂ ಈ ಹೊಸ ಮತ್ತು ಹಳೆಯ ಸಂಘಗಳು ಆರ್ಥಿಕ ಸಬಲತೆ ಹೊಂದುತ್ತವೆಯೇ? ಎಂಬುದರ ಬಗ್ಗೆ ಹಾಗೂ ಈ ಹೊಸ ಮತ್ತು ಹಳೆಯ ಸಂಘದ ಕಾರ್ಯವ್ಯಾಪ್ತಿಯನ್ನು ಬಿಟ್ಟುಕೊಡಲು ಆ ಹಳೆಯ ಸಂಘದ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನದ ಪ್ರತಿಯನ್ನು ಲಗತ್ತಿಸಬೇಕು.

3(11) ಸಂಬಂಧಪಟ್ಟ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾರಿಗಳಿಂದ ಸಂಘದ ನೊಂದಣಿಗಾಗಿ ಆಡಳಿತಾತ್ಮಕ ಅನುಮೋದನೆ ನೀಡಲು ಶಿಫಾರಸ್ಸಿನ ಪತ್ರ. ಸದರಿ ಪತ್ರದಲ್ಲಿ ನಿಯೋಜಿತ ಸಂಘದಲ್ಲಿ ಇರಬಹುದಾದ ಒಟ್ಟು ನೇಕಾರರ ಸಂಖ್ಯೆ, ಒಟ್ಟು ಮಗ್ಗಗಳ ಸಂಖ್ಯೆಯನ್ನು ಅವಶ್ಯವಾಗಿ ನಮೂದಿಸತಕ್ಕದ್ದು. ಮೇಲ್ಕಂಡ ದಾಖಲಾತಿಗಳನ್ನು ಸಹಕಾರ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಸಾಧ್ಯತಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಂಬಂಧಪಟ್ಟ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು ಇವರ ಮುಖಾಂತರ ಅವರ ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಸಲ್ಲಿಸುವುದು.

4. ನಿಯೋಜಿತ ಸಂಘದ ನೋಂದಣಿಗಾಗಿ ಸಲ್ಲಿಸಬೇಕಾಗಿರುವ ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು.

4(1) ನಿಯೋಜಿತ ಸಂಘದ ಯೋಜನಾ ವರದಿ. ಇದರಲ್ಲಿ ಕೆಳಕಂಡ ಮಾಹಿತಿ ಇರಬೇಕು.

- ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯಲ್ಲಿನ ಒಟ್ಟು ಜನಸಂಖ್ಯೆ. ಅದರಲ್ಲಿ ನೇಕಾರರ ಸಂಖ್ಯೆ ಮತ್ತು ಹೊಸದಾಗಿ ನೇಕಾರಿಕೆ ಉದ್ಯೋಗ ಪ್ರಾರಂಭಿಸುವವರ ಸಂಖ್ಯೆ.
- ಹಾಲಿ ಕಾರ್ಯನಿರ್ವಹಿಸುತ್ತಿರುವ ಮಗ್ಗಗಳ ಸಂಖ್ಯೆ, ಕಾರ್ಯನಿರತ, ಕಾರ್ಯಸ್ಥಗಿತವಾಗಿರುವ ಮಗ್ಗಗಳ ಸಂಖ್ಯೆ, ಹೊಸದಾಗಿ ಅಳವಡಿಸಬೇಕೆಂದಿರುವ ಮಗ್ಗಗಳ ಸಂಖ್ಯೆ.
- ನೇಕಾರರಿಗೆ ಸತತವಾಗಿ ದುಡಿಮೆ ಸಿಗಬೇಕಾದರೆ ಅವಶ್ಯವಿರುವ ಕಚ್ಚಾ ವಸ್ತುಗಳ ಪೂರೈಕೆಯ ಸಂಬಂಧ (ಪ್ರತಿ ತಿಂಗಳಿಗೆ ಪ್ರಮಾಣ ಮತ್ತು ಅದರ ಕಿಮ್ಮತ್ತು, ಅದರಿಂದ ಉತ್ಪಾದನೆ ಮಾಡಬಹುದಾದ ಪಕ್ಕಾ ಮಾಲು, ಅದರ ಕಿಮ್ಮತ್ತು, ತಗಲುವ ವೆಚ್ಚ ಮತ್ತು ಗಳಿಸಬಹುದಾದ ನಿವ್ವಳ ಲಾಭ.)
- ಸಂಘವನ್ನು ಸುಸ್ಥಿತಿಯಿಂದ ಪ್ರಾರಂಭಿಸಲು ಅವಶ್ಯಕವಾಗಿರುವ ಹಣವನ್ನು ಕ್ರೋಢೀಕರಿಸುವ ವಿಧಾನಗಳು.
- ಸಂಘವನ್ನು ಪ್ರಾರಂಭಿಸಿದರೆ, ಪ್ರಾರಂಭದ ಕನಿಷ್ಟ 2-3 ವರ್ಷಗಳವರೆಗೆ, ವ್ಯವಹಾರವನ್ನು ನಡೆಸಲು ಸರ್ಕಾರದ ಸಹಾಯವಿಲ್ಲದೆಯೇ, ಸಾಧ್ಯ ಉಂಟೆ?
- ನೇಕಾರರು ಎಂಬ ಪದಕ್ಕೆ ಕೆಳಕಂಡಂತೆ ವಿವರಣೆ ನೀಡಲಾಗಿದೆ.
    - ಪರಂಪರಗತವಾಗಿ ನೇಕಾರಿಕೆ ಉದ್ಯೋಗವನ್ನು ಮಾಡುತ್ತಿರುವವರು.
    - ಹಾಲಿ ನೇಕಾರಿಕೆ ಉದ್ಯೋಗವನ್ನು ಮಾಡುತ್ತಿರುವವರು.
    - ಹೊಸದಾಗಿ ನೇಕಾರಿಕೆ ಉದ್ಯೋಗವನ್ನು ಪ್ರಾರಂಭಿಸಲು ನಿರ್ಧರಿಸಿ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದವರು.

4(2) ಸಂಘದ ನೋಂದಣಿಗಾಗಿ ಅರ್ಜಿಯನ್ನು ಸಹಕಾರ ಸಂಘಗಳ ನಿಯಮ 1960 ನಿಯಮ 3 ರಲ್ಲಿ ನಿಗದಿಪಡಿಸಿದ ಅನುಸೂಚಿ-ಎ ಮತ್ತು ಅನುಬಂಧಗಳಲ್ಲಿ ಕನಿಷ್ಟ 15 ಸದಸ್ಯರ ಮಾಹಿತಿ ಸಲ್ಲಿಸುವುದು (ಅನುಬಂಧ 2(ಅ) (ಆ) ರಂತೆ.

4(3) ಸಂಘದ ನೋಂದಣಿಗಾಗಿ ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ನೀಡಿದ ಅನುಮತಿ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಅನುಪಾಲಿಸಿದ ಬಗ್ಗೆ ವರದಿ.

4(4) ನೋಂದಣಿಗಾಗಿ ಪ್ರಾರಂಭಿಕ ಷೇರು ಧನ ನೀಡಿದ ಸದಸ್ಯರ ಹೆಸರುಗಳು, ವಿಳಾಸದೊಂದಿಗೆ ಮತ್ತು ಪಾವತಿ ಮಾಡಿದ ಮೊಬಲಗು, ವಿವರಿಸುವ ತಃಖ್ತೆ (ಅನುಬಂಧದಂತೆ)

4(5) 6 ಬೈಲಾ ಪ್ರತಿಗಳನ್ನು ಬೆರಳಚ್ಚು ಅಥವಾ ಮುದ್ರಣಗೊಳಿಸಿ ಅಚ್ಚುಕಟ್ಟಾಗಿ ಬೈಡಿಂಗ್ ಮಾಡಿಸಿ ಕೊನೆಯ ಪುಟದಲ್ಲಿ ಕನಿಷ್ಟ 15 ಜನ ಪ್ರವರ್ತಕರಿಂದ ಎಲ್ಲಾ ಪ್ರತಿಗಳಿಗೂ ಸಹಿ ಮಾಡಿಸಿ ಸಲ್ಲಿಸುವುದು. (ನೋಂದಣಿ ಮಾಡಲು ಕನಿಷ್ಟ ಅರ್ಧ ಪುಟ ಸ್ಥಳಾವಕಾಶ ಬಿಡುವುದು.)

4(6) ಪ್ರಾರಂಭಿಕ ಷೇರು ಬಂಡವಾಳವನ್ನು ಸಹಕಾರ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಂದ ಪಡೆದ ಧೃಢೀಕರಣ ಪತ್ರ.

5. ಬೈಲಾಗಳನ್ನು ಈ ಕಛೇರಿಯಿಂದ ಮೊದಲೇ ಅನುಮೋದಿಸಿಕೊಂಡಿರುವುದು ಅವಶ್ಯವಾಗಿರುತ್ತದೆ. ಸದರಿ ಬೈಲಾಗಳಲ್ಲಿ ಸಹಕಾರ ಸಂಘಗಳ ನಿಯಮ 1960 ನಿಯಮ 5 ರಲ್ಲಿ ನಮೂದಿಸಿದ ಎಲ್ಲಾ ವಿಷಯಗಳ ಜೊತೆಗೆ ಕೆಳಕಂಡ ಅವಕಾಶಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

5(1) ಸಂಘದ ಕಾರ್ಯವ್ಯಾಪ್ತಿಯನ್ನು ಹಾಗೂ ಕೇಂದ್ರ ಕಛೇರಿಯ ಅಂಚೆ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಇದೇ ಉದ್ದೇಶದ ಇನ್ನೊಂದು ಸಂಘದ ಕಾರ್ಯವ್ಯಾಪ್ತಿಯನ್ನು ಆ ಸಂಘದ ಕಾರ್ಯಕಾರಿ

ಮಂಡಳಿ ಸಭೆಯ ಅನುಮತಿ ಪಡೆಯದೆ ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯಲ್ಲಿ ಸೇರಿಸುವುದು ನಿಷಿದ್ಧವಾಗಿದೆ.

5(2) ಸಂಘವನ್ನು ಯಾವುದೇ ಜಾತಿ ಮತ್ತು ಧರ್ಮಗಳಿಗೆ ಸಂಬಂಧಪಟ್ಟ ವ್ಯಕ್ತಿ ಅಥವಾ ದೇವರ ಹೆಸರಿನಲ್ಲಿ ಸ್ಥಾಪನೆ ಮಾಡದೆ, ಯಾವ ಊರಿನಲ್ಲಿ ಸ್ಥಾಪನೆಯಾಗಿದೆಯೋ ಸಾಧ್ಯವಾದಷ್ಟು ಆ ಊರಿನ ಹೆಸರಿನಲ್ಲಿ ನೋಂದಣಿ ಮಾಡಬೇಕು. ಒಂದೇ ಊರಿನಲ್ಲಿ ಒಂದಕ್ಕಿಂತ ಹೆಚ್ಚಿನ ಸಂಘಗಳು ಹುಟ್ಟಿಕೊಂಡಾಗ ನಂ. 1, 2, 3 ಹೀಗೆ ಹೆಸರು ಕೊಡಬಹುದಾಗಿದೆ.

5(3) ಸಂಘದ ಉದ್ದೇಶಗಳಲ್ಲಿ ಇತರೆ ಉದ್ದೇಶಗಳ ಜೊತೆಗೆ ನೂಲಿಗೆ ಬಣ್ಣ ಹಾಕುವುದು, ವಾರ್ಪ್ ಮಾಡಿಸುವುದು, ನೇಯ್ಗೆ ಮಾಡುವುದು, ಪ್ರಿಂಟಿಂಗ್ ಮಾಡುವುದು, ಫಿನಿಶಿಂಗ್ ಮತ್ತು ಕ್ಯಾಲಂಡರಿಂಗ್ ಮಾಡುವ ಉದ್ದೇಶಗಳನ್ನು ಸೇರಿಸಬಹುದಾಗಿದೆ. ಆದರೆ ರೇಷ್ಮೆ ಹುಳು ಸಾಕುವ, ಗೂಡು ಮಾಡುವ ಸಹಕಾರ ಸಂಘಗಳನ್ನು ಸಹಕಾರ ಇಲಾಖೆಯವರು ನೋದಂಣಿ ಮಾಡುತ್ತಿರುವುದರಿಂದ ಈ ಉದ್ದೇಶಗಳನ್ನು ಸೇರಿಸಬಾರದು.

5(4) ಕಾರ್ಯದರ್ಶಿ ಮತ್ತು ಇತರ ನೌಕರರ ನೇಮಕ ಮಾಡಲು ಮತ್ತು ವೇತನ ಶ್ರೇಣಿ ನಿಗದಿಪಡಿಸಲು ಸಹಕಾರ ಸಂಘಗಳ ಕಾಯ್ದೆ ನಿಯಮ 1960 ರ ನಿಯಮ 17 ಮತ್ತು 18 ರ ಪ್ರಕಾರ ಸರ್ಕಾರ ಅಧಿಸೂಚನೆ ಹೊರಡಿಸಿ ಪ್ರತ್ಯಾಯೋಜಿಸಿರುವ ರೀತ್ಯಾ ಅಧಿಕಾರ ನೀಡಿರುವ ಮತ್ತು ಅಧಿಕಾರ ಹೊಂದಿರುವ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

5(5) ನೋಂದಾಯಿಸುವ ಸಹಕಾರ ಸಂಘದ ಪದಾಧಿಕಾರಿಗಳ ಸಂಖ್ಯೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 28(ಎ) (2) ರಲ್ಲಿ ವಿಧಿಸಿರುವಂತೆ ಕಾರ್ಯವ್ಯಾಪ್ತಿಯ ಅನುಸಾರ ಇರಬೇಕು. ಅಂದರೆ ಕನಿಷ್ಟ 9 ಚುನಾಯಿತ ನಿರ್ದೇಶಕರು ಇರಬೇಕು, ಈ ಪೈಕಿ ಒಂದು ಸ್ಥಾನ ಮಹಿಳೆಗೆ, ಒಂದು ಸ್ಥಾನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಡಬೇಕು ಹಾಗೂ ಆಯಾ ವ್ಯಾಪ್ತಿಯನುಸಾರ ಜವಳಿ ಇಲಾಖೆ, ಸಹಕಾರ ಇಲಾಖೆ ಮತ್ತು ಆರ್ಥಿಕ ಸಹಾಯ ನೀಡುವ ಬ್ಯಾಂಕುಗಳಿಂದ ಒಂದೊಂದು ಪ್ರತಿನಿಧಿ ಇರುವಂತೆ ಮತ್ತು ಸದರಿಯವರಿಗೆ ಪದನಿಮಿತ್ತ ನಿರ್ದೇಶಕರೆಂದು ಬೈಲಾದಲ್ಲಿ ಅವಕಾಶ ಕಲ್ಪಿಸತಕ್ಕದ್ದು.

ಕೈಮಗ್ಗ ಹಾಗೂ ವಿದ್ಯುತ್ ಮಗಗ್ಗಳ ಸಹಕಾರ ಸಂಘಗಳ ಸ್ಥಾಪನೆಗೆ ಪ್ರಾರಂಭಿಕ ಕನಿಷ್ಟ ಅವಶ್ಯಕತೆಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ಸಂಘದ ಕಾರ್ಯವ್ಯಾಪ್ತಿ | ಸದಸ್ಯತ್ವ | | ಕನಿಷ್ಟ ಮಗ್ಗಗಳ ಅಸ್ತಿತ್ವ | | ಪ್ರಾರಂಭಿಕ ಷೇರು ಸಂಗ್ರಹಣೆ | |
|---|---|---|---|---|---|---|---|
| | | ಕೈಮಗ್ಗ ಸಂಘಗಳಿಗೆ | ವಿದ್ಯುತ್‌ಮಗ್ಗ ಸಂಘಗಳಿಗೆ | ಕೈಮಗ್ಗ ಸಂಘಗಳಿಗೆ | ವಿದ್ಯುತ್‌ಮಗ್ಗ ಸಂಘಗಳಿಗೆ | ಕೈಮಗ್ಗ ಸಂಘಗಳಿಗೆ | ವಿದ್ಯುತ್‌ಮಗ್ಗ ಸಂಘಗಳಿಗೆ |
| 1 | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ | 150 | 70 | 70 | 15 | 25,000 | 75,000 |
| 2 | ತಾಲ್ಲೂಕು ಮಟ್ಟ | 250 | 80 | 80 | 20 | 35,000 | 1,00,000 |
| 3 | ಜಿಲ್ಲಾ ಮಟ್ಟಕ್ಕಿಂತ ಕಡಿಮೆ | 350 | 100 | 100 | 40 | 50,000 | 1,25,000 |
| 4 | ಜಿಲ್ಲಾ ಮಟ್ಟ | 500 | 250 | 200 | 60 | 1,50,000 | 2,00,000 |

6(1) ನೇಕಾರರ ಸಹಕಾರ ಸಂಘದ ಸದಸ್ಯರಾಗಬಯಸುವವರು ಸಹಕಾರ ಸಂಘಗಳ ಕಾಯ್ದೆ 16 ರಲ್ಲಿ ನಮೂದಿಸಿದ ಎಲ್ಲಾ ಅರ್ಹತೆಗಳನ್ನು ಪಡೆದಿರುವ ಜೊತೆಗೆ ನೇಕಾರಿಕೆಯನ್ನು ಕುಲಕಸುಬು ಮಾಡಿಕೊಂಡವರು, ಹಾಲಿ ನೇಕಾರಿಕೆ ಮಾಡುತ್ತಿರುವವರು ಅಥವಾ ನೇಕಾರಿಕೆ ಬಗ್ಗೆ ತರಬೇತಿ ಪಡೆದವರಾಗಿರಬೇಕು. ಒಂದೇ ಉದ್ದೇಶದ ಇನ್ನೊಂದು ಸಂಘದಲ್ಲಿ ಸದಸ್ಯತ್ವವನ್ನು ಹೊಂದುವವರು ನಿಯೋಜಿತ ಹೊಸ ಸಂಘದಲ್ಲಿ ಸದಸ್ಯತ್ವ ಪಡೆಯಲು ಅನರ್ಹರಾಗಿರುತ್ತಾರೆ. (ಸಹಕಾರ ಸಂಘಗಳ ಕಾಯ್ದೆ ಕಲಂ 17 ರ ಅನ್ವಯ).

ಸಹಿ/-
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು
ಹಾಗೂ ಪದನಿಮಿತ್ತ ಸಹಕಾರ ಸಂಘಗಳ ಅಪರ ನಿಬಂಧಕರು
ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.

ಪ್ರತಿಗಳನ್ನು:

1. ಮಾಹಿತಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ರಾಜ್ಯದಲ್ಲಿಯ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಅವರಿಗೆ ಕಳುಹಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿ., (ಕಾವೇರಿ ಹ್ಯಾಂಡ್‌ಲೂಮ್ಸ್) ಬೆಂಗಳೂರು, ಇವರಿಗೆ ಮಾಹಿತಿಗಾಗಿ ರವಾನಿಸಿದೆ.
3. ಮಾಹಿತಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ರಾಜ್ಯದಲ್ಲಿಯ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ಕಳುಹಿಸಲಾಗಿದೆ.
4. ಮಾಹಿತಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ರಾಜ್ಯದಲ್ಲಿಯ ಸಹಕಾರ ಸಂಘಗಳ ಉಪನಿಬಂಧಕರು, ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಕಳುಹಿಸಲಾಗಿದೆ.
5. ಕೇಂದ್ರ ಕಛೇರಿಯ ಹಿರಿಯ ಅಧಿಕಾರಿಗಳಿಗೆ ಮಾಹಿತಿಗಾಗಿ.
6. ಆದೇಶ ಕಡತ.